ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪನವರು.—ಎಷ್ಟು ದಿವಸದಲ್ಲಿ ಆಗುತ್ತದೆಂದು ಹೇಳುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಷ್ಟು ದಿವಸ ಎಂದು ಹೇಳುವುದಕ್ಕಾಗುವುದಿಲ್ಲ. ಅಂತೂ ತೀವ್ರವಾದ ಆಲೋಚನೆಯಲ್ಲಿದೆಯೆಂದು ಹೇಳಬಲ್ಲೆ.

Sri G. A. ACHARYA (Bangalore District–General).—Is it true that in several parts of the town pipes are leaky?

The Hon'ble Sri T. MARIAPPA.—Yes, I know. That is also one of the reasons and we are repairing them. That is with regard to certain localities only.

ಶ್ರೀ ಎಂ. ಗೋವಿಂದರೆಡ್ಡಿಯವರು (ಚಿತ್ರದುರ್ಗ ಜಿಲ್ಲೆ).—ಬೆಂಗಳೂರಿನಲ್ಲಿ ನೀರಿನ ಸರಬರಾಯಿ ಮಾಡುವವರು ಯಾರು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಪಬ್ಲಿಕ್ ವರ್ಕ್ಸ್ ಇಲಾಖೆಯವರು.

ಶ್ರೀ ಎಂ. ಗೋವಿಂದರೆಡ್ಡಿಯವರು.—ಹೀಗೆ ನೀರನ್ನು ಸರಬರಾಯಿ ಮಾಡುವುದು ಸರ್ಕಾರದವರ ಕರ್ತವ್ಯವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು.

ಶ್ರೀ ಎಂ. ಗೋವಿಂದರೆಡ್ಡಿಯವರು.—ಸರ್ಕಾರದವರು ಇದು ತಮ್ಮ ಕರ್ತವ್ಯವೆಂದು ಹೇಳಿ ಒದಗಿಸಿಕೊಡುವುದಕ್ಕೆ ಕಾರಣವೇನು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೀರಿನ ಸರಬರಾಯಿ ವಿಷಯವನ್ನು ಸರ್ಕಾರದವರು ವಹಿಸಿಕೊಳ್ಳದೆ ಇದ್ದರೆ ಇನ್ಯಾರು ವಹಿಸಿಕೊಳ್ಳುತ್ತಾರೆ?

ಶ್ರೀ ಎಂ. ಗೋವಿಂದರೆಡ್ಡಿಯವರು.—ಸಂಸ್ಥಾನದಲ್ಲಿರುವ ಎಲ್ಲಾ ಮುನಿಸಿಪಾಲಿಟಿಗಳವರೂ ತಮ್ಮನ್ನು ನೀರಿನ ಸರಬರಾಯಿ ವಿಷಯವನ್ನು ವಹಿಸಿಕೊಳ್ಳಬೇಕೆಂದು ಹೇಳಿದರೆ ವಹಿಸಿಕೊಳ್ಳುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸರ್ಕಾರದವರು ಮಿಕ್ಕ ಮುನಿಸಿಪಾಲಿಟಿಗಳಿಗೆ ಗ್ರಾಂಟ್ ಅಥವಾ ಸ್ಥಾಲಗಳನ್ನು ಒದಗಿಸಿಕೊಟ್ಟಿರುವುದು ಮಾನ್ಯ ಸದಸ್ಯರಿಗೇ ಗೊತ್ತು.

ಶ್ರೀ ಎಂ. ಗೋವಿಂದ ರೆಡ್ಡಿಯವರು.—ಇಲ್ಲಿಯೂ ಹಾಗೆಯೇ ಮಾಡುವುದಕ್ಕಾಗುವುದಿಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಮುನಿಸಿಪಾಲಿಟಿಯವರು ನಮಗೆ ದುಡ್ಡು ಕೊಡುತ್ತಿದ್ದಾರೆ; ಹಾಗೆಯೇ ಮಾಡುವುದಿಲ್ಲ.

ಶ್ರೀ ಎಂ. ಗೋವಿಂದ ರೆಡ್ಡಿಯವರು.—ಬೇರೆ ಕಡೆಗಳಲ್ಲೂ ತಾವು ಮುನಿಸಿಪಾಲಿಟಿಯವರನ್ನು ಹಣ ಕೇಳಿದ್ದರೆ ಕೊಡುತ್ತಿರಲಿಲ್ಲವೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಒಂದು ಸೊಡ್ಡ ಪ್ರದೇಶವಾಗಿದ್ದು, ಮುನಿಸಿಪಾಲಿಟಿಯವರು ಈ ಬಗ್ಗೆ ತಗುಲುವ ಖರ್ಚುಗಳನ್ನು ವಹಿಸಿಕೊಳ್ಳಲು ಒಪ್ಪಿದರೆ ಸರ್ಕಾರದವರು ಮಾಡುತ್ತಾರೆ, ಅಷ್ಟೆ.

ಶ್ರೀ ಎಂ. ಗೋವಿಂದ ರೆಡ್ಡಿಯವರು.—ಇನ್ನೂ ಯಾವುದಾದರೂ ಮುನಿಸಿಪಾಲಿಟಿಯವರು ಮುಂದೆ ಬಂದು ತಾವೂ ಹೀಗೆ ಹಣ ಕಂಟ್ರಿಬ್ಯೂಟ್ ಮಾಡುತ್ತೇವೆಂದು ಹೇಳಿದರೆ ತಾವು ವಹಿಸಿಕೊಳ್ಳುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದು ಊಹೆಯ ವಿಷಯವಾಯಿತು.

ಶ್ರೀ ವಿ. ಎಸ್. ನಾರಾಯಣರಾಯರು (ಬೆಂಗಳೂರು ಸಿಟಿ ಮುನಿಸಿಪಾಲಿಟಿ).—ಬೆಂಗಳೂರು ಕಾರ್ಪೊರೇಷನ್ನಿನವರು ತಾವೇ ಈ ಕೆಲಸವನ್ನು ವಹಿಸಿಕೊಳ್ಳುತ್ತೆವೆಂದು ತಮ್ಮನ್ನು ಕೇಳಿಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್ ಬೇಕು.

Mr. SPEAKER.—Next question No. 166. Janab Mohamed Imam. The Hon'ble Member is not present. The question will be treated as unstarred.

Next question. No. 12. The Hon'ble Minister Sri R. Chennigaramiah is not here. What shall we do?

The Hon'ble Sri H. SIDDAIYA (Minister for Revenue and Excise).—He is not well Sir. He is coming late.

Sri G. A. ACHARYA (Bangalore District—General).—Other Ministers may answer, Sir. It is learnt that such a procedure is adopted in the Parliament.

Sri M. N. JOIS (Mysore District—General).—It is joint responsibility, they may go on. (laughter).

Sri H. K. VEERANNA GOWDA (Mandya District—General).—If the files are with the concerned Minister, how can some other Minister answer?

Mr. SPEAKER.—Question No. 119. Sri D. H. Chandrasekharaiya. The Hon'ble Member is not present. The question will be treated as unstarred.

Next Question. No. 170.—Janab Imam. The Hon'ble Member is not present. That question also will be treated as unstarred question.

Next question. No. 29. Sri S. Kariappa.—

Out-break of Cholera in soms Districts of the State.

*Q.—29. **Sri S. KARIAPPA** (Bangalore District—General).—

Will the Government be pleased to state:—

(*a*) the cause for the recent out-break of cholera in some of the districts in the State;

(*b*) the number of persons who succumbed to this epidemic (figures may be given talukwar)?

A.—**The Hon'ble Sri K. CHENGALARAYA REDDY** (Chief Minister).—

(*a*) The infection was imported into the State through the pilgrims returning from Chikkallur Jatra in Kollegal Taluk.

(*b*) *Vide* statement appended below.—

Statement.

District	Taluk	No. of Places affected		Attacks	Death
		Towns	Villages		
Bangalore ...	Channapatna	1	26	177	94
	Kankanhalli	...	32	116	59
	Ramanagaram	1	8	22	12
Mandya ...	Pandavapura (French-rocks) ...	1	...	1	...
	Maddur	1	7	23	17
	Malavalli	2	67	552	280
	Mandya	1	4	22	11
	Srirangapatna	1	1	8	2
Mysore ...	Chamarajanagar	...	12	51	39
	Gundlupet	1	5	20	12
	Hunsur	...	1	10	2
	Krishnarajanagar	...	2	11	3
	Mysore	...	1	3	2
	T.-Narsipur	1	32	320	184
	Yelandur	2	12	60	41
	Total ...	12	210	1,391	758

ಶ್ರೀ ಎಸ್. ಕರಿಯಪ್ಪನವರು.—ಈ ಕಾಲರಾ ಖಾಯಿಲೆ ಕೊಯಮತ್ತೂರು ಜಿಲ್ಲೆಯಿಂದಲ್ಲವೇ ವರ್ಷ ವರ್ಷವೂ ಇಲ್ಲಿಗೆ ಬರುತ್ತಿರುವುದು ?

*ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಈಸಲ ಕೊಯಮತ್ತೂರು ಜಿಲ್ಲೆಯಿಂದ ಬಂದಿದ್ದೆಂದು ಗೊತ್ತಾಗಿದೆ.

ಶ್ರೀ ಎಸ್. ಕರಿಯಪ್ಪನವರು.—ಪದೇಪದೇ ಈ ಖಾಯಿಲೆ ಚಿಕ್ಕಕಲ್ಲೂರು ಜಾತ್ರೆ ಮಹದೇಶ್ವರ ಬೆಟ್ಟದ ಜಾತ್ರೆಯಿಂದ ಬರುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಪದೇಪದೇ ಬರುತ್ತಿರುವುದೆಂದು ನನಗೆ ಗೊತ್ತಿಲ್ಲ. ಈಸಲ ಅಲ್ಲಿಂದ ಬಂತೆಂದು ಗೊತ್ತಾಗಿದೆ.

ಶ್ರೀ ಎಸ್. ಕರಿಯಪ್ಪನವರು.—ಇದರ ಹಿಂದಿನವರ್ಷ ಅಲ್ಲಿಂದ ಬಂದಿರಲಿಲ್ಲವೇ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಹಾಗೆಂದು ನಿರ್ದಿಷ್ಟವಾಗಿ ನಾನು ಹೇಳಲಾರೆ.

ಶ್ರೀ ಎಸ್. ಕರಿಯಪ್ಪನವರು.—1934ನೆಯ ಇಸವಿಯಲ್ಲಿ ಈ ಖಾಯಿಲೆ ಬಂದಿರಲಿಲ್ಲವೇ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಇರಬಹುದು. ಈಗ ಹೇಳಲಾರೆ.

ಶ್ರೀ ಎಸ್. ಕರಿಯಪ್ಪನವರು.—ಹಾಗೆ ಈ ಖಾಯಿಲೆ ಪದೇಪದೇ ಆ ಕಡೆಯಿಂದ ಬರುವುದು ಸರ್ಕಾರದವರ ಗಮನಕ್ಕೆ ಬಂದಿದ್ದ ಪಕ್ಷದಲ್ಲಿ ಅದು ಯಾವ್ಯಾವ ಡಿಸ್ಟ್ರಿಕ್ಟ್‌ಗಳಿಗೆ ಮೊದಲು ಬರಬಹುದೆಂಬ ಅವಕಾಶವಿದೆಯೆಂಬುದನ್ನು ತಿಳಿದಿದ್ದೀರಾ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಮೊಟ್ಟಮೊದಲು ಮಂಡ್ಯ ಮೈಸೂರು ಡಿಸ್ಟ್ರಿಕ್ಟ್‌ಗೆ ಹರಡುತ್ತದೆಂದು ಗೊತ್ತಾಗಿದೆ.

ಶ್ರೀ ಎಸ್. ಕರಿಯಪ್ಪನವರು.—ಆದ್ದರಿಂದ ಇಲ್ಲಿಂದ ಅಲ್ಲಿಗೆ ಹೋಗತಕ್ಕ ಜನಗಳಿಗೆ ಪ್ರತಿಬಂಧಕವನ್ನೇನಾದರೂ ಹಾಕಿದ್ದೀರಾ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಈಸಲದ ವಿಷಯ ತಾವು ಕೇಳುವುದಾದರೆ, ಈಸಲ ಮಹದೇಶ್ವರದ ಜಾತ್ರೆಯೇ ನಡೆಯಲಿಲ್ಲವೆಂದು ತಮಗೇ ಗೊತ್ತಿದೆ. ಈ ಸಂಬಂಧದಲ್ಲೇ ಮುಂಜಾಗ್ರತೆ ಕಾರ್ಯಕ್ರಮವನ್ನು ಕೈಕೊಳ್ಳಬೇಕೆಂದು ಮದ್ರಾಸ್ ಸರ್ಕಾರದವರೊಡನೆ ವ್ಯವಹಾರ ನಡೆಸಿ, ಅಲ್ಲಿನ ಮಾನ್ಯ ಮಂತ್ರಿಗಳಿಗೆ ತಿಳಿಸಿ ನೀವು ಸೂಕ್ತ ಕಾರ್ಯಕ್ರಮ ತೆಗೆದುಕೊಂಡರೆ ನಿಮಗೂ ಕ್ಷೇಮ ನಮಗೂ ಕ್ಷೇಮ ಎಂದು ಸೂಚಿಸಿದ್ದರಮೇರೆ ಅವರು ಜಾತ್ರೆ ನಿಲ್ಲಿಸಿದರು.

ಶ್ರೀ ಎಸ್. ಕರಿಯಪ್ಪನವರು.—ಹಾಗಾದರೆ ಇದೇ ಕಾರ್ಯಕ್ರಮವನ್ನು ಚಿಕ್ಕಕಲ್ಲೂರು ಜಾತ್ರೆಯ ಸಮಯದಲ್ಲೇಕೆ ಮಾಡಲಿಲ್ಲ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಆಗ್ಗೆ ಇದರ ಊಹೆಯಿರಲಿಲ್ಲ. ಆದ್ದರಿಂದ ಆ ರೀತಿ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರದವರು ಯೋಚಿಸಲಿಲ್ಲ.

ಶ್ರೀ ಎಸ್. ಕರಿಯಪ್ಪನವರು.—ಈಜಾತ್ರೆಗೆ ಹೋಗತಕ್ಕ ಜನಗಳು ಕೇವಲ ಕೆಲವೇ ಕೆಲವು ಮಾರ್ಗಗಳಲ್ಲಿ ಹೋಗುತ್ತಾರಲ್ಲವೇ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಹೌದು.

ಶ್ರೀ ಎಸ್. ಕರಿಯಪ್ಪನವರು.—ಹಾಗಿದ್ದ ಮೇಲೆ ಈ ಜನಗಳು ಎಲ್ಲೆಲ್ಲಿ ಹೋಗುತ್ತಾರೋ ಅಲ್ಲೆ ಒಂದು ಸ್ಥಾಯೀ ವ್ಯವಸ್ಥೆಯನ್ನು ಏರ್ಪಾಡು ಮಾಡುವುದು ಸಾಧ್ಯವೇ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಸಾಧ್ಯವಿದೆ. ಅದರಂತೆಯೇ ಸರ್ಕಾರದವರು ಈಸಲ

ಕಾರ್ಯಕ್ರಮವನ್ನು ಕೈಕೊಂಡಿದ್ದಾರೆಂದು ನಾನು ಹೇಳ ಲಚ್ಚಿಸುತ್ತೇನೆ.

ಶ್ರೀ ಬಿ. ಚೆನ್ನಬೈರೇಗೌಡರು (ಬೆಂಗಳೂರು ಜಿಲ್ಲೆ).—1947ನೆಯ ಇಸವಿಯಲ್ಲಿ ಇದೇ ಕಾಲರಾ ವಿಚಾರದಲ್ಲಿ ಅಸೆಂಬ್ಲಿ ಮುಂದೆ ಒಂದು ನಿಲುವಳಿ ಸೂಚನೆ ಬಂದಿರಲಿಲ್ಲವೇ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ನೋಟೀಸ್ ಬೇಕು.

ಶ್ರೀ ಬಿ. ಚೆನ್ನಬೈರೇಗೌಡರು.—1947ನೆಯ ಇಸವಿಯಿಂದ ಪ್ರತಿವರ್ಷವೂ ಈ ಖಾಯಿಲೆ ಬರುತ್ತಿದೆಯೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಗೊತ್ತಿಲ್ಲ; ನೋಟೀಸ್ ಬೇಕು.

ಶ್ರೀ ಬಿ. ಚೆನ್ನಬೈರೇಗೌಡರು.—ಈಗ ನಾಲ್ಕು ವರ್ಷದಿಂದಲೂ ಈ ಖಾಯಿಲೆ ಮಹದೇಶ್ವರ ಬೆಟ್ಟದ ಜಾತ್ರೆ, ಇಲ್ಲವೇ ಚಿಕ್ಕಕಲ್ಲೂರು ಜಾತ್ರೆಯಿಂದಲ್ಲವೇ ಬರುತ್ತಿರುವುದು ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಇಲ್ಲ.

ಶ್ರೀ ಬಿ. ಚೆನ್ನಬೈರೇಗೌಡರು.—ಅಲ್ಲಿಂದಲೇ ಬರುತ್ತಿದೆಯೆಂದು ನೀವೇ ಹೇಳಿದಿರಿ !!

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಪ್ರತಿವರ್ಷವೂ ಅಲ್ಲಿಂದಲೇ ಬರುತ್ತಿದೆಯೆಂದು ಹೇಳಲಲ್ಲ. ಹಾಗೆ ಹೇಳುವುದಕ್ಕೆ ಸಾಕಾದಷ್ಟು ಕಾರಣಗಳಿಲ್ಲ.

ಶ್ರೀ ಬಿ. ಚೆನ್ನಬೈರೇಗೌಡರು.—ಮುಂದಾದರೂ ಹೀಗೆ ಬರುವುದನ್ನು ತಪ್ಪಿಸುವುದಕ್ಕೆ ತಕ್ಕ ಕಾರ್ಯಕ್ರಮ ಕೈಕೊಳ್ಳುತ್ತೀರಾ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಸರ್ಕಾರದವರು ಈಗಾಗಲೇ ಸಾಧ್ಯವಾದಷ್ಟು ಮುಂಜಾಗ್ರತೆ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆ ಎಂದು ಹೇಳಲಚ್ಚಿಸುತ್ತೇನೆ. ಆ ರೀತಿಯಾಗಿ ತೆಗೆದುಕೊಳ್ಳದೆ ಹೋಗಿದ್ದರೆ ಇನ್ನೂ ತುಂಬಾ ನಷ್ಟವಾಗುತ್ತಿತ್ತು.

ಶ್ರೀ ವಿ. ಎಸ್. ನಾರಾಯಣರಾಯರು (ಬೆಂಗಳೂರು ನಗರ).—ಮದ್ರಾಸ್ ಸರ್ಕಾರದವರಿಗೆ ಈರೀತಿ ಮುಂಜಾಗ್ರತೆ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕೆಂದು ತಾವು ಹೇಳಿಲ್ಲವೇ !

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಮಹದೇಶ್ವರ ಬೆಟ್ಟದ ಜಾತ್ರೆಯ ವಿಷಯದಲ್ಲಿ ಆರೀತಿ ಕಾರ್ಯಕ್ರಮ ಕೈಕೊಳ್ಳಬೇಕೆಂದು ವ್ಯವಹಾರ ನಡೆಸಿದ್ದೇವೆ. ಚಿಕ್ಕಕಲ್ಲೂರಿಂದ ಈಸಲ ಬಂತೆಂದು ಗೊತ್ತಾಗಿದೆ.

ಶ್ರೀ ಬಿ. ಎಂ. ಶಾಮಣ್ಣಗೌಡರು (ಬೆಂಗಳೂರು ಸಿವಿಲ್ ಪ್ರದೇಶ).—ಕಾಲರಾ ರೋಗ ಬರದ ಹಾಗೆ ಮಾಡುವುದಕ್ಕೆ ಯಾವ ಸರ್ಕಾರದವರಿಗಾದರೂ ಸಾಧ್ಯವೇ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಸಾಕಾದಷ್ಟು ಮುಂಜಾಗ್ರತೆ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯ. ಅಷ್ಟೇ ಹೊರತು ಸಂಪೂರ್ಣವಾಗಿ ತಡೆಗಟ್ಟುವುದಕ್ಕೆ ಯಾವ ಸರ್ಕಾರದವರಿಗೂ ಸಾಧ್ಯವಿಲ್ಲವೆಂದು ಹೇಳಬಹುದು.

ಶ್ರೀ ಡಿ. ಎಂ. ಸಿದ್ದಯ್ಯನವರು (ಮೈಸೂರು ಜಿಲ್ಲೆ).—ಇಲ್ಲ ಉತ್ತರದಲ್ಲಿ, ಮೈಸೂರು ಡಿಸ್ಟ್ರಿಕ್ಟಿನಲ್ಲಿ ಟಿ.ನರಸೀಪುರ ತಾಲ್ಲೂಕಿನಲ್ಲಿ 32 ಹಳ್ಳಿಗಳಲ್ಲಿ ಈ ರೋಗ ಹರಡಿ 320 ಜನರಿಗೆ ತಗಲಿತೆಂದೂ, ಯಳಂದೂರು ತಾಲ್ಲೂಕಿನಲ್ಲಿ 12 ಹಳ್ಳಿಗಳಲ್ಲಿ 60 ಜನರಿಗೆ ತಗಲಿತೆಂದೂ ಹೇಳಿದೆ. ಇಷ್ಟೊಂದು ಜನರಿಗೆ ತಗಲಿರಬೇಕಾದರೆ, ಅಲ್ಲಿಯವರೆಗೂ ಹೆಲ್ತ್ ಇಲಾಖೆಯವರು ಏನು ಮಾಡುತ್ತಿದ್ದರು ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಈ ಉಪದ್ರವ ಬರುತ್ತದೆಂದು ಸೂಚನೆ ಬಂದ ತಕ್ಷಣ ಹೆಲ್ತ್ ಇಲಾಖೆಯವರು ಏನೇನು ಮುಂಜಾಗರೂಕತೆ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕೆಂದಿದೆಯೋ ಅದೆಲ್ಲವನ್ನೂ ಕೈಕೊಂಡಿದ್ದಾರೆ. ಅವರು ಯಾವ್ಯಾವ ಊರಿನಲ್ಲಿ ಕೆಲಸ ಮಾಡಿದ್ದಾರೆಂದು ಹೆಸರುಗಳನ್ನು ಬೇಕಾದರೂ ಹೇಳಲು ಸಿದ್ಧನಾಗಿದ್ದೇನೆ.

ಶ್ರೀ ಡಿ. ಎಂ. ಸಿದ್ದಯ್ಯನವರು.—ಹೋದ ವರುಷ ಮಹದೇಶ್ವರ ಬೆಟ್ಟದ ಜಾತ್ರೆಯಿಂದ ಈ ಕಾಲರಾ ಬಂದು ನಮ್ಮ ಡಿಸ್ಟ್ರಿಕ್ಟಿನ ಸಾಪಿರಾರು ಜನರು ಸತ್ತು ಹೋದರೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಸಾಪಿರಾರು ಜನರು ಸತ್ತುಹೋದರೆಂದು ನಮ್ಮ ಗಮನಕ್ಕೆ ಬಂದಿಲ್ಲ.

ಶ್ರೀ ಡಿ. ಎಂ. ಸಿದ್ದಯ್ಯನವರು.—ಹೋದವರ್ಷ ಮತ್ತು ಆಚೆವರ್ಷ ಮೊದಲು ನಮ್ಮ ಜಿಲ್ಲೆಗೆ ಈ ಕಾಲರಾ ರೋಗ ಬಂದಾಗ ಆರೋಗ್ಯ ಇಲಾಖೆಯವರು ಸರಿಯಾದ ಮುಂಜಾಗ್ರತೆ ಕ್ರಮಗಳನ್ನು ತೆಗೆದುಕೊಳ್ಳದಿದ್ದುದರಿಂದ ಸಾಪಿರಾರು ಜನರು ಸತ್ತುಹೋದರೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಅದಕ್ಕೆ ಆಗಲೇ ಉತ್ತರ ಹೇಳಿದ್ದೇನೆ.

ಶ್ರೀ ಡಿ. ಎಂ. ಸಿದ್ದಯ್ಯನವರು.—ಸಾಕಾದಷ್ಟು ಮುಂಜಾಗ್ರತೆ ಕ್ರಮಗಳನ್ನು ತೆಗೆದುಕೊಂಡಿದ್ದಾರೆಂದು ಹೇಳಿದಿರಿ. ಈ ಪ್ರಶ್ನೆಗೆ ಕೊಟ್ಟಿರುವ ಉತ್ತರದ ಪ್ರಕಾರ ಟಿ. ನರಸೀಪುರ ತಾಲ್ಲೂಕಿನಲ್ಲಿ 32 ಗ್ರಾಮಗಳಲ್ಲಿ 320 ಜನರಿಗೆ ರೋಗ ತಗಲಿ 184 ಜನ ಸತ್ತಿದ್ದಾರೆ. ಇಷ್ಟೊಂದು ಜನ ಮೃತಿಹೊಂದಬೇಕಾದರೆ ಮೊದಲೇ ಮುಂಜಾಗ್ರತೆ ಕಾರ್ಯಗಳನ್ನು ಕೈಗೊಂಡಿದ್ದರೆ ಇದನ್ನು ತಡೆಗಟ್ಟಲು ಸಾಧ್ಯವಾಗುತ್ತಿರಲಿಲ್ಲವೆ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಆಗಲೇ ನಾನು ಹೇಳಿದಂತೆ ಎಷ್ಟು ಸಾಧ್ಯವೋ ಅಷ್ಟು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಚಿಕ್ಕಕಲ್ಲೂರು ಜಾತ್ರೆಯಿಂದ ಕಾಲರಾ ಹರಡುತ್ತಿದೆಯೆಂದು ತಿಳಿದ ತಕ್ಷಣವೇ ಜನಾರೋಗ್ಯ ಇಲಾಖೆಯವರು ನೂಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಂಡದ್ದರಿಂದ ಅಷ್ಟಕ್ಕೆ ರೋಗ ಹರಡುವುದು ನಿಂತಿತು. ಇಲ್ಲದಿದ್ದರೆ ಇನ್ನೂ ಹೆಚ್ಚಾಗಿ ಹರಡುತ್ತಿತ್ತು. ಆದಷ್ಟು ಜಾಗ್ರತೆ ಜನರಿಗೆ ಇನಾಕ್ಯುಲೇಷ್ಟ್ ಮಾಡಲು ತಕ್ಕ ನಲಕರಣಿಗಳು, ಅದಕ್ಕೆ ಬೇಕಾದ ಸಿಬ್ಬಂದಿ ಎಲ್ಲವನ್ನೂ ಇಲಾಖೆಯವರು ಒದಗಿಸಿ ಕಾರ್ಯಕ್ರಮ ಕೈಗೊಂಡಿದ್ದಾರೆ.

ಶ್ರೀ ಡಿ. ಎಂ. ಸಿದ್ದಯ್ಯನವರು.—ಈ ಸಾರಿಯೇನೋ ಚಿಕ್ಕಕಲ್ಲೂರು ಜಾತ್ರೆಯಿಂದ ಹಬ್ಬಿತು. ಮಹದೇಶ್ವರನ ಜಾತ್ರೆಗೆ ನಮ್ಮ ಪ್ರದೇಶದಿಂದ ಹೋಗತಕ್ಕ ಜನರಿಗೆಲ್ಲ ಇನಾಕ್ಯುಲೇಷ್ಟ್ ಮಾಡುವುದಕ್ಕೆ ಏರ್ಪಾಡು ಮಾಡುವುದಲ್ಲದೆ ಮಿಥ್ರಾಸ್ ಸರ್ಕಾರಕ್ಕೂ ಬರೆದು ಅವರೂ ತಕ್ಕ ಮುಂಜಾಗ್ರತಾಕ್ರಮಗಳನ್ನು ಕೈಗೊಳ್ಳುವಂತೆ ಏರ್ಪಾಡುಮಾಡುತ್ತೀರಾ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಅದನ್ನು ಈ ವರ್ಷವೇ ಮಾಡಿದ್ದೇವೆ.

ಶ್ರೀ ಎಂ. ಸಿ. ವೆಂಕಟೇಶ್ವರವರು (ಮಂಡ್ಯ ಜಿಲ್ಲೆ—ನಿಮ್ಮ ಪಂಗಡ).—ಮಳವಳ್ಳ ತಾಲ್ಲೂಕಿನಲ್ಲಿ ರೋಗ ತಗಲಿದವರ ಸಂಖ್ಯೆ 552 ಕ್ಕಿಂತಲೂ ಜಾಸ್ತಿಯೆಂದರೆ ಒಪ್ಪುತ್ತೀರಾ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.— ಅಂಕಿ ಅಂಶಗಳು ಮಾನ್ಯ ಸದಸ್ಯರ ಮುಂದಿವೆ.

ಶ್ರೀ ಎಂ. ಸಿ. ವೆಂಕಟೇಶ್ವರವರು.—ಈ ವರ್ಷ ಏನು ಏನು ಮುಂಜಾಗ್ರತೆ ಕ್ರಮಗಳನ್ನು ಕೈಗೊಂಡಿದ್ದಾರೆ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.— ಕಾಲರಾ ರೋಗ ಹಠಾತ್ತನೆ ತಲೆದೋರಿ ಬಹಳ ಬೇಗ ಹರಡುತ್ತದೆ. ಅದನ್ನು ತಡೆಗಟ್ಟಲು ಏನೇನು ಕಾರ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅವುಗಳನ್ನು ತಕ್ಷಣ ತೆಗೆದುಕೊಂಡಿದ್ದಾರೆಂದು ಹೇಳಿದ್ದೇನೆ.

ಶ್ರೀ ಎಂ. ಸಿ. ವೆಂಕಟೇಶ್ವರವರು.— ನಾಲ್ಕು ವರ್ಷ ಗಳಿಂದ ಮಹದೇಶ್ವರನ ಜಾತ್ರೆಗೆ ಹೋಗಿಬಂದ ಜನರಿಗೆ ಮಳವಳ್ಳಿ ತಾಲ್ಲೂಕಿನಲ್ಲಿ ಬಹಳ ಜಾಸ್ತಿ ತೊಂದರೆಯಾ ಗುತ್ತಿದೆಯೆಂದು ವರದಿ ಬಂದಿಲ್ಲವೆ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.— ಉತ್ತರ ಆಗಲೇ ಹೇಳಿದ್ದೇನೆ. ಹೆಚ್ಚುಹೆಚ್ಚಾಗಿ ಮುಂಜಾ ಗ್ರತೆ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಈಗಾಗಲೇ ನಾನು ಹೇಳಿದಂತೆ ಈ ವಿಷಯದಲ್ಲಿ ಬಹಳ ಆಸಕ್ತಿ ಯಿಂದ ಇಲಾಖೆಯವರು ಕೆಲಸಕಾರ್ಯಗಳನ್ನು ನಡೆಸಿ ದ್ದಾರೆಂದು ಹೇಳುತ್ತೇನೆ. ಈಬಗ್ಗೆ ಮಾನ್ಯ ಸದಸ್ಯರೂ ಇತರರೂ ಏನಾದರೂ ವಿಷಯಗಳನ್ನು ಗಮನಕ್ಕೆ ತಂದರೆ ಅವರು ತೆಗೆದುಕೊಳ್ಳುವ ಕಾರ್ಯಕ್ರಮಗಳು ಇನ್ನೂ ಹೆಚ್ಚು ಪರಿಣಾಮಕಾರಿಯಾಗುತ್ತವೆಂದು ಹೇಳಲು ಸಂತೋಷಿಸುತ್ತೇನೆ.

ಶ್ರೀ ಎಂ. ಸಿ. ವೆಂಕಟೇಶ್ವರವರು.—ಈ ಜಾತ್ರೆಗೆ ಹೋಗತಕ್ಕ ಜನ ಕಾನಕರ್ಣಹಳ್ಳಿ, ಕುಣಿಗಲು, ಮಳ ವಳ್ಳಿ, ಮಂಡ್ಯ ಮಂತಾದ ತಾಲ್ಲೂಕುಗಳ ಮೇಲೆ ಹೋಗ ಬೇಕೆಂಬುದು ಸರ್ಕಾರದವರಿಗೆ ಗೊತ್ತಿದೆಯೆ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.— ಗೊತ್ತೇ ಇದೆ.

ಶ್ರೀ ಎಂ. ಸಿ. ವೆಂಕಟೇಶ್ವರವರು.---ಹೋದವರ್ಷ ಕಾರ್ಯಕ್ರಮಗಳನ್ನು ತೆಗೆದುಕೊಂಡಿರಬಹುದು. ಆದರೆ ಈವರ್ಷ ತೆಗೆದುಕೊಂಡಿಲ್ಲವೆಂಬುದು ಸರ್ಕಾರದ ಗಮ ನಕ್ಕೆ ಬಂದಿದೆಯೆ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.— ಯಾವ ಜಾತ್ರೆಯ ವಿಷಯದಲ್ಲಿ?

ಶ್ರೀ ಎಂ. ಸಿ. ವೆಂಕಟೇಶ್ವರವರು.—ಚಿಕ್ಕಲ್ಲೂರು ಮತ್ತು ಮಹದೇಶ್ವರನ ಜಾತ್ರೆ ವಿಷಯದಲ್ಲಿ.

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.— ಚಿಕ್ಕಲ್ಲೂರು ಜಾತ್ರೆಯಿಂದ ಪ್ರತಿವರ್ಷವೂ ಈ ತೊಂದರೆ ಬರುತ್ತದೆಂಬುದು ಸರ್ಕಾರದವರಿಗೆ ಗೊತ್ತಾಗಿಲ್ಲ, ಸಾಮಾನ್ಯವಾಗಿ ಮಹದೇಶ್ವರನ ಜಾತ್ರೆಯಿಂದ ಈ ರೋಗ ಹರಡುವುದೆಂದು ಗೊತ್ತಿದೆ. ಇದು ದೊಡ್ಡ ಜಾತ್ರೆ. ಇದರ ವಿಷಯದಲ್ಲಿ ಸರ್ಕಾರದವರು ಏನೇನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದೆಲ್ಲವನ್ನೂ ತೆಗೆ ದುಕೊಂಡಿರುವುದಲ್ಲದೆ ಮದ್ರಾಸ್ ಸರ್ಕಾರದವರೊಡ ನೆಯೂ ಪತ್ರವ್ಯವಹಾರ ನಡೆಸಿ ಅವರೂ ತಕ್ಕ ಏರ್ಪಾ ಡುಗಳನ್ನು ಮಾಡುವಂತೆ ಸೂಚಿಸಿದ್ದೇವೆ. ನಾವೂ ಕೂಡ ಇದಕ್ಕಾಗಿ ವಿಶೇಷ ಸಿಬ್ಬಂದಿ ಮತ್ತು ಸಲಕರಣೆ ಗಳನ್ನು ಮಂಜೂರುಮಾಡಿ ಜನರಿಗೆ ಇನಾಕ್ಯುಲೇಷನ್ ಮುಂತಾದುವನ್ನು ಮಾಡಲು ಏರ್ಪಾಡು ಮಾಡಿದ್ದೆವು. ಆದರೆ ಈಸಾರಿ ಈ ರೋಗ ಹರಡಿದ್ದು ಚಿಕ್ಕಲ್ಲೂರು ಜಾತ್ರೆಯಿಂದ. ಅದಕ್ಕೂ ಇದಕ್ಕೂ ಸಂಬಂಧವಿಲ್ಲ.

ಶ್ರೀ ಎಂ. ಸಿ. ವೆಂಕಟೇಶ್ವರವರು.—ಮುಂದಿನ ವರ್ಷ ಮಹದೇಶ್ವರನ ಜಾತ್ರೆಗೆ ಹೋಗುವ ಜನ ಮಳ ವಳ್ಳಿ ತಾಲ್ಲೂಕಿನ ಮುತ್ತತ್ತಿ ಗ್ರಾಮದ ಮಾರ್ಗವಾಗಿ ಹೋಗಬೇಕಾಗುತ್ತದೆ, ಅಲ್ಲಿ ಸೂಕ್ತ ಮುಂಜಾಗ್ರತೆ ಕ್ರಮಗಳನ್ನು ತೆಗೆದುಕೊಳ್ಳುತ್ತೀರಾ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.— ಖಂಡಿತವಾಗಿಯೂ ತೆಗೆದುಕೊಳ್ಳುತ್ತೇವೆ. ಇದು ಪ್ರಜೆ ಗಳ ಆರೋಗ್ಯ ಮತ್ತು ಪ್ರಾಣಕ್ಕೆ ಸಂಬಂಧಪಟ್ಟ ವಿಚಾರವಾದ್ದರಿಂದ ಸರ್ಕಾರದವರು ಎಷ್ಟು ಮಾತು ವರ್ಜಿ ವಹಿಸಬೇಕೋ ಅಷ್ಟೂ ವಹಿಸಿ ಕೆಲಸಮಾಡುತ್ತಾ ರೆಂದು ಭರವಸೆ ಕೊಡಬಲ್ಲೆ.

ಶ್ರೀ ಎಂ. ಸಿ. ವೆಂಕಟೇಶ್ವರವರು.—ಮಳವಳ್ಳಿ ತಾಲ್ಲೂಕಿನಲ್ಲಿ 552 ಜನಕ್ಕೆ ಖಾಯಿಲೆ ತಗಲಿ 280 ಜನ ನತ್ತರೆಂದು ತಿಳಿಸಲಾಗಿದೆ. ಇವರಲ್ಲಿ ಅನೇಕರು ಬೇರೆ ತಾಲ್ಲೂಕಿನವರೆಂಬುದು ಸರ್ಕಾರದವರಿಗೆ ಗೊತ್ತಿ ದೆಯೆ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.— ಎಲ್ಲಿ ಖಾಯಿಲೆ ಆಯಿತು ಎಂಬುದರ ಆಧಾರದ ಮೇಲೆ ಉತ್ತರ ಕೊಟ್ಟಿದೆ.

ಶ್ರೀ ಎಂ. ಸಿ. ವೆಂಕಟೇಶ್ವರವರು.—ಮಳವಳ್ಳಿಗೆ ಬೇರೆ ಬೇರೆ ತಾಲ್ಲೂಕುಗಳಿಂದ ಬರುವವರಿಂದ ಈ ಖಾಯಿಲೆ ಹೆಚ್ಚಾಗಿ ಹರಡುತ್ತದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.— ಅದಕ್ಕೆ ಆಗಲೇ ಉತ್ತರ ಹೇಳಿದ್ದೇನೆ.

ಶ್ರೀ ಎಂ. ಎಲ್. ನಂಜರಾಜ ಅರಸಿನವರು (ಮೈಸೂರು ಜಿಲ್ಲೆ).—ಈಗ ಕಾಲರಾ ಉಪದ್ರವ ಸಂಪೂರ್ಣವಾಗಿ ಹತೋಟಿಗೆ ಬಂದಿದೆಯೆ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.— ಈಗ ಬಂದಿದೆ.

ಶ್ರೀ ಎಂ. ಎಲ್. ನಂಜರಾಜ ಅರಸಿನವರು.—ಈಗ್ಗೆ ಎಂಟು ದಿನಗಳಿಂದೀಚೆಗೆ ಗುಂಡ್ಲುಪೇಟೆ, ನಂಜನಗೂಡು ತಾಲ್ಲೂಕುಗಳಲ್ಲಿ ಹೆಚ್ಚುತ್ತಿದೆಯೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.— ಇಲ್ಲ.

ಶ್ರೀ ಎಂ. ಎಲ್. ನಂಜರಾಜ ಅರಸಿನವರು.—ಇದು ಹರಡದಂತೆ ತಕ್ಕ ಕಾರ್ಯಕ್ರಮವನ್ನು ಸರ್ಕಾರದವರು ತೆಗೆದುಕೊಳ್ಳುತ್ತಾರೆಯೆ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.— ತೆಗೆದುಕೊಳ್ಳ ತ್ತೇವೆ ಮತ್ತು ಈಗಾಗಲೇ ತೆಗೆದುಕೊಂಡಿ ದ್ದೇವೆ.

ಶ್ರೀ ಎಂ. ಎಲ್. ನಂಜರಾಜ ಅರಸಿನವರು.— ಗುಂಡ್ಲುಪೇಟೆ ಮತ್ತು ನಂಜನಗೂಡು ತಾಲ್ಲೂಕುಗಳಲ್ಲಿ virulent ಆಗಿ ಹಬ್ಬುತ್ತಿರುವುದು ಗೊತ್ತಿಲ್ಲವೆಂದು ಹೇಳಿದ್ದೀರಿ. ಅದನ್ನು ನೋಡಿ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಆ ತಾಲ್ಲೂಕುಗಳಲ್ಲಿ ಆ ರೀತಿ ಹರಡುತ್ತಿರುವುದು ಗೊತ್ತಿಲ್ಲ ವೆಂದು ಹೇಳಿದೆ. ಈ ರೋಗದ ಉಪದ್ರವ ಕಂಡ ತಕ್ಷ ಣವೇ ಅದನ್ನು ತಡೆಗಟ್ಟಿ ನಿಲ್ಲಿಸಲು ಏನೇನು ಮಾಡ ಬೇಕೋ ಅದನ್ನೆಲ್ಲಾ ಮಾಡಲು ಸರ್ಕಾರದವರು ಆಜ್ಞೆ ಮಾಡಿದ್ದಾರೆ. ಈ ರೋಗ ಹರಡುವ ಕಡೆಗೆ ವಿಶೇಷ ಸಿಬ್ಬಂದಿ ಮತ್ತು ಸಲಕರಣೆಗಳನ್ನೊದಗಿಸಿ ಜನರಿಗೆ ಇನಾಕ್ಯುಲೇಷನ್ ಮಾಡಲು ಏರ್ಪಾಡು ಮಾಡಿದ್ದಾರೆ. ಇನ್ನೂ ಏನೇನು ಅವಶ್ಯಕವೋ ಅದನ್ನೆಲ್ಲಾ ಮಾಡಲು ಏರ್ಪಾಡು ಮಾಡಿದ್ದಾರೆ.

Mr. SPEAKER.—Question No. 175 Sri Kadidal Manjappa. The Hon'ble

Member is not present. The question will be treated as unstarred question.

Question No. 9. Sri H. C. Linga Reddy.

Planning Commission for suggesting Development Projects for Mysore State.

*Q.—9. **Sri H. C. LINGA REDDY** (Kolar District—General).—

Will the Government be pleased to state :—

(*a*) whether there is a Planning Commission for the State of Mysore to devise and suggest development projects and capital works ;

(*b*) the agency that is at present planning for Mysore ;

(*c*) whether the said agency suggested any development works or capital projects after the advent of Responsible Government in the State ;

(*d*) the various stages at which these development projects are, their estimates and the time that is required for completion ?

*A.—**The Hon'ble Sri K. CHENGALARAYA REDDY** (Chief Minister).—

(*a*) No.

(*b*) Heads of Departments formulate schemes for their respective departments. These schemes are co-ordidated into an overall plan for the State by the Commissioner of Economic Development and Planning after they are considered by the Inter-Departmental Committee on Planning which consists of the Hon'ble Chief Minister as Chairman, the Commissioner of Economic Development and Planning as Secretary of the Committee and all Secretaries to Government, the Director of Industries and Commerce, the Commissioner for Food Production, the Commissioner for Rural Development and the Commissioner on Special Duty as Members.

(*c*) Yes.

(*d*) The implementation of the plans is to commence from 1951-52. The plans for development of Irrigation and Power during the next fifteen years are estimated to cost Rs. 3,210 lakhs and Rs. 4,908 lakhs, respectively. The plans in other Sections have yet to be finalised.

Sri H. C. LINGA REDDY.—With reference to question (*a*) you have said 'No' ; are not these days days of plans and programmes?

*The Hon'ble Sri K. CHENGALARAYA REDDY.—Yes.

Sri H. C. LINGA REDDY.—Is it not necessary that the State should have a Planning Commission so that it may plan and programme for the State with regard to various developments necessary for the State ?

The Hon'ble Sri K. CHENGALARAYA REDDY.—Planning for the State is necessary. But a separate agency for this State as the Hon'ble Member conceives is not necessary.

Sri H. C. LINGA REDDY.—Will it not be necessary that the Planning Commission should consist of experts including non-officials ?

The Hon'ble Sri K. CHENGALARAYA REDDY.—It is a matter of opinion.

Sri H. C. LINGA REDDY.—Is any outside body planning for the State ?

The Hon'ble Sri K. CHENGALARAYA REDDY.—I do not know what the Hon'ble Member means by 'outside body' ; but there is a National Planning Commission which is engaged in Planning for the whole of India.

Sri H. C. LINGA REDDY.—Is the National Planning Commission going to draw up plans and programmes for the Mysore State ?

The Hon'ble Sri K. CHENGALARAYA REDDY.—Yes, the National Planning Commission is planning for the whole Nation. It gets plans formulated from the various States and it evolves a co-ordinated plan and programme for the different regions of India.

Sri H. C. LINGA REDDY.—Are there any Mysore representatives on the Planning Commission with first-hand knowledge of the State ?

The Hon'ble Sri K. CHENGALARAYA REDDY.—The Hon'ble Member may perhaps know the constitution of the Planning Commission. It is not constituted on the basis of giving representation for individual States. It consists of experts drawn from any State and it is functioning on that basis. There are departmental committees which formulate and draft plans and they are sent to the National